ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ ೨೫ನೇ ಮಾರ್ಚ್ ೧೯೮೮, ಚೈತ್ರ ೫, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೦೫ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ರವರು ಪೀಠವನ್ನು ಅಲಂಕರಿಸಿದರು.]

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಗ್ರಾಮಂ ಸೇವಾ ಸಹಕಾರಿ ಸಂಘಗಳಲ್ಲಿ ದುರ್ವ್ಯವಹಾರದ ತನಿಖೆ ಮಾಡುವ ಬಗ್ಗೆ.

೧೨೧೪ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಗ್ರಾಮ ಸೇವಾ ಸಹಕಾರ ಸಂಘಗಳಲ್ಲಿ ದುರ್ವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅರ್ಜುನ್‌ವಾಡ್, ಹೊನ್ನೆಹಳ್ಳಿ ಹಾಗೂ ಇನ್ನುಳಿದ ತಾಲ್ಲೂಕಿನ ಗ್ರಾಮ ಸೇವಾ ಸಹಕಾರ ಸಂಘಗಳಲ್ಲಿ ನಡೆದಿರುವ ದುರ್ವ್ಯವಹಾರಗಳನ್ನು ತನಿಖೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ತಪ್ಪಿತಸ್ಥ ಆಡಳಿತ ಮಂಡಳಿಯ ಮೇಲೆ ಕಾನೂನಿನಂತೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಶ್ರೀ ಎಚ್. ವಿಶ್ವನಾಥಯ್ಯ, (ಮಾನ್ಯ ಸಹಕಾರ ಸಚಿವರು):—

ಅ) ಬಂದಿದೆ.

ಆ) ಈ ಸಂಘಗಳಲ್ಲಿ ನಡೆದಿರುವ ದುರ್ವ್ಯವಹಾರ ಪ್ರಕರಣಗಳಲ್ಲಿ ಸಹಕಾರ ಸಂಘಗಳ ಕಾಯಿದೆಯ ಪ್ರಕಾರ ಕಾನೂನು ಕ್ರಮಗಳನ್ನು ಜರುಗಿಸಲಾಗಿದೆ

ಇ) ತಪ್ಪಿತಸ್ಥ ಆಡಳಿತ ಮಂಡಳಿಗಳ ಮೇಲೆ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲು ಸರಕಾರ ಪರಿಶೀಲಿಸುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸ್ವಾಮಿ, ಹುಕ್ಕೇರಿ ತಾಲ್ಲೂಕಿನಲ್ಲಿ ಗ್ರಾಮಸೇವಾ ಸಹಕಾರ ಸಂಘಗಳಲ್ಲಿ ದುರ್ವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿರುವ ಪ್ರಶ್ನೆಗೆ 'ಬಂದಿದೆ' ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಸ್ವಾಮಿ, ಹಾಗಾದರೆ ಈ ಹಣದ ದುರ್ವ್ಯವಹಾರ ಯಾರಿಂದ ಆಯಿತು? ಎಷ್ಟು ಹಣ ದುರ್ವ್ಯವಹಾರ ಆಗಿದೆ? ಮತ್ತು ದುರ್ವ್ಯವಹಾರ ಮಾಡಿದವರಮೇಲೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂಬುದನ್ನು ವಿವರವಾಗಿ ಹೇಳಬೇಕು.

ಶ್ರೀ ಹೆಚ್. ವಿಶ್ವನಾಥಯ್ಯ.— ಸ್ವಾಮಿ, ಅರ್ಜುನವಾಡ ಸಹಕಾರ ಸಂಘದಲ್ಲಿ ದುರ್ವ್ಯವಹಾರ ಆಗಿರತಕ್ಕಂಥ ಹಣ ೪೦,೮೦೦ ರೂಪಾಯಿಗಳು. ಈಗಾಗಲೇ ೧೩ ಜನರಿಂದ ೧೬,೦೭೮ ರೂ. ಗಳಂ

ವಸೂಲಾಗಿದ್ದು ಉಳಿದ ೨೬ ಜನರಿಂದ ೨೪.೬೭೨ ರೂಪಾಯಿಗಳನ್ನು ವಸೂಲ್ಮಾಡಬೇಕಾಗಿದೆ ಎಂದು ನಿರೀಕ್ಷಣಾ ಅಧಿಕಾರಿಗಳು ತಮ್ಮ ಅಂತಿಮ ವರದಿಯಲ್ಲಿ ತಿಳಿಸಿರುತ್ತಾರೆ. ಆದರೆ ಮೇರೆಗೆ ಕಲಂ ೬೮ರ ಪ್ರಕಾರ ಆಜ್ಞೆ ಮಾಡಿದ ಅಧಿಭಾರ ಪ್ರಕರಣ ದಾಖಲು ಮಾಡಲು ಸಂಘಕ್ಕೆ ಮೆ॥ ಸಹಾಯಕ ನಿಬಂಧಕರು, ಸ. ಸಂಘಗಳು, ಬೆಳಗಾಂ ಇವರು ತಿಳಿಸಿರುತ್ತಾರೆ. ಅಂತಿಮವಾಗಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುತ್ತದೆ.

ಇದೇ ರೀತಿ ಹೊನ್ನಿಹಳ್ಳಿ ಸಹಕಾರ ಸಂಘದಲ್ಲಿ ೧೩,೯೯೪ ರೂಪಾಯಿಗಳು ದುರುಪಯೋಗ ಆಗಿದೆ. ಈ ಬಗ್ಗೆ ಸಂಬಂಧಪಟ್ಟವರಮೇಲೆ ಕ್ರಿಮಿನಲ್ ಕೇಸನ್ನು ಹಾಕಿ ಹಣವನ್ನು ಈಗಾಗಲೇ ವಸೂಲ್ಮಾಡಲಾಗಿದೆ. ಇದು ೧೯೮೨-೮೩ನೇ ಇಸವಿಯಲ್ಲಿ ಆಗಿದ್ದು ಇನ್ನು ೮೫-೮೬ ಮತ್ತು ೮೬-೮೭ ರಲ್ಲಿ ಆಗಿರತಕ್ಕ ಹಣದ ದುರುಪಯೋಗ ೬೧,೦೬೫-೬೩ ರೂಪಾಯಿಂಗಳು. ಇದರ ಬಗ್ಗೆ ಆ ಸಂಘದ ಮಾಜಿ ಕಾರ್ಯದರ್ಶಿಯವರಿಗೆ ಕಾರಣವನ್ನು ಕೇಳುವ ನೋಟಿಸನ್ನು ಕೊಡಲಾಗಿದೆ. ಮಾಜಿ ಕಾರ್ಯದರ್ಶಿಯವರ ಮೇಲೆ ಪಂಚಾಯತ್ ಪ್ರಕರಣ ದಾಖಲು ಮಾಡಿದ್ದು ಸದರಿಯವರ ಆಸ್ತಿಗಳ ಮೇಲೆ ಅಂದರೆ ಅವರ ಮನೆಯನ್ನು ೮೦ ಸಾವಿರ ರೂಪಾಯಿಗಳಿಗಾಗಿ ಜಪ್ತಿ ಮಾಡಲಾಗಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಸಹಕಾರ ಸಂಘಗಳಲ್ಲಿ ಅಂದರೆ ಸಹಕಾರ ಸಂಘದ ಆಡಳಿತದಲ್ಲಿ ಅಲ್ಲಿಯ ಕಾರ್ಯದರ್ಶಿ ಮತ್ತು ಆಡಳಿತ ಮಂಡಲಿಯವರು ಮಾಡಿದಂಥ ದುರ್ವ್ಯವಹಾರ ದಿಂದಾಗಿ ಬೇರೆಕಡೆಯಲ್ಲಿ ಸದಸ್ಯರಿಗೆ ಸಾಲ ಸಿಕ್ಕುತ್ತಿಲ್ಲ. ಅವರು ಬೇರೆಯವರ ಹೆಸರಿನಲ್ಲಿ ಬೇನಾಮಿ ವ್ಯವಹಾರ ಮಾಡಿ ಸಾಲವನ್ನು ತೆಗೆದುಕೊಂಡಿದ್ದಾರೆ. ಯಾರು ನಿಜವಾಗಿ ಸಾಲವನ್ನು ಸಹಕಾರ ಸಂಘದಿಂದ ತೆಗೆದುಕೊಂಡೇ ಇಲ್ಲ. ಅಂಥವರಿಗೆ ಈಗ ತೊಂದರೆಯಾಗಿದೆ. ಇದರ ಬಗ್ಗೆ ತಾವು ಏನಂ ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಇನ್ನು ತಪ್ಪಿತಸ್ಥ ಆಡಳಿತ ಮಂಡಲಿಗಳ ಮೇಲೆ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರ ಪರಿಶೀಲಿಸುತ್ತದೆಂದು ಹೇಳಿದ್ದೀರಿ ಇಂಥ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಇನ್ನೂ ಎಷ್ಟಿವೆ? ಆ ಸಂಸ್ಥೆಗಳ ಮೇಲೆ ತಾವು ಏನಂ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಹೆಚ್ ವಿಶ್ವನಾಥಯ್ಯ.— ಇಂಥ ಆಡಳಿತ ಮಂಡಲಿಗಳು ಇನ್ನೂ ಎಷ್ಟಿದೆ ಎಂದು ತಾವು ಕೇಳಿದ್ದೀರಿ. ಆದರೆ ಇದಕ್ಕೆ ತಾವು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ. ಹೊನ್ನಿಹಳ್ಳಿ ಸಂಸ್ಥೆಯಲ್ಲಿ ಕೆಲವು ಸದಸ್ಯರು ಬೇನಾಮಿ ಹೆಸರಿನಲ್ಲಿ ಸಾಲವನ್ನು ಪಡೆದಿದ್ದಾರೆಂದು ತಾವು ಹೇಳಿದ್ದೀರಿ. ಅವರು ತೆಗೆದುಕೊಂಡಿರುವ ಸಾಲ ಬೇನಾಮಿ ಹೌದೇ ಅಲ್ಲವೇ ಎಂಬುದನ್ನು ನಾವು ತಿಳಿದುಕೊಳ್ಳದೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅವರು ತಮ್ಮ ಹೆಸರನ್ನು ಕೊಟ್ಟು ಸ್ಟ್ಯಾಂಪ್ ಮೇಲೆ ಸಹಿಯನ್ನು ಮಾಡಿದ್ದರೆ ಆದಕ್ಕೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಅವರು ಏನಾದರೂ ತಕರಾರನ್ನು ವ್ಯಕ್ತಮಾಡಿದರೆ ಆದರ ಬಗ್ಗೆ ಕ್ರಮ ತೆಗೆದುಕೊಂಡು ಇತ್ಯರ್ಥ ಮಾಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಇಲ್ಲಿ ನಮ್ಮ ಸರ್ಕಾರ ಇರಬಹುದು, ಅಥವಾ ನಿಮ್ಮ ಸರ್ಕಾರ ಇರಬಹುದು. ಸಾಲವನ್ನು ಮನ್ನಾ ಮಾಡುತ್ತೇವೆ, ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತೀರಿ. ಕಾರ್ಯದರ್ಶಿಯವರು ಅಥವಾ ಅಧ್ಯಕ್ಷರು ಸಾಲವನ್ನು ತೆಗೆದು ಕೊಂಡಿದ್ದರೆ, ನೀವು ಮನ್ನಾ ಮಾಡತಕ್ಕದ್ದು ಇಂತಹವರಿಗೂ ಅನುಕೂಲವಾಗುತ್ತದೆ. ಆದರೆ ಸಾಲಗಾರರು ಅವರಲ್ಲ. ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ.

ಶ್ರೀ ಎಚ್. ವಿಶ್ವನಾಥಯ್ಯ.— ಸಾಲವನ್ನು ಮನ್ನಾ ಮಾಡುವುದಕ್ಕೆ ನಮಗೆ ಇಷ್ಟ ಇಲ್ಲ ನಾವು ಸಾಲದ ಮೇಲಿನ ಬಡ್ಡಿಯನ್ನು ಮಾತ್ರ ಮನ್ನಾ ಮಾಡುತ್ತೇವೆ. ಅಸಲು ಮತ್ತು ಬಡ್ಡಿ ಎರಡನ್ನೂ ಮನ್ನಾ ಮಾಡುವುದಿಲ್ಲ. ಈಗಾಗಲೇ ಅವರು ಸಾಲವನ್ನು ತೆಗೆದುಕೊಂಡಿದ್ದರೆ ಅವರು ತಮ್ಮ ಹೆಸರನ್ನು ಅಲ್ಲಿ ಕೊಟ್ಟಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಇದಕ್ಕೆ ಜವಾಬ್ದಾರರು ಎಂದು ತೀರ್ಮಾನವಾದರೆ ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದರೆ ಇದು ತೀರ್ಮಾನವಾಗುವುದಕ್ಕೆ ಮುಂಚಿತವಾಗಿಯೇ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.